

ಅದು 2016ರ ಅಕ್ಟೋಬರ್ 12. ಬಿಸಿಸಿಐ ಮೊದಲ ಬಾರಿಗೆ ತಟಸ್ಥ ಸ್ಥಳದಲ್ಲಿ ಆಯೋಜಿಸಿದ್ದ ರಣಜಿ ಪಂದ್ಯ. ಕರ್ನಾಟಕ ಹಾಗೂ ಜಾರ್ಖಂಡ್ ತಂಡಗಳ ಆಟಗಾರರು ಗ್ರೇಟರ್ ನೋಯ್ಡಾದ ಕ್ರೀಡಾಂಗಣದಲ್ಲಿ ಅಭ್ಯಾಸಕ್ಕೆ ಸಜ್ಜಾಗುತ್ತಿದ್ದರು. ಕ್ರಿಕೆಟ್ ಕಿಟ್ ಬೆನ್ನಿಗೆ ನೇತುಹಾಕಿಕೊಂಡು ದಿಢೀರನೆ ಬಂದ ನೀಳಕಾಯದ ವ್ಯಕ್ತಿಯನ್ನು ನೋಡಿ ಆಟಗಾರರೆಲ್ಲರೂ ‘ಓ... ಥಾಲಾ’ ಎಂದು ಅಚ್ಚರಿ ವ್ಯಕ್ತಪಡಿಸಿದರು. ಕಿಂಚಿತ್ತೂ ತಡ ಮಾಡದೆ ಆ ವ್ಯಕ್ತಿ ಜಾರ್ಖಂಡ್ ತಂಡದ ಆಟಗಾರರನ್ನು ಮೈದಾನಕ್ಕೆ ಕರೆದುಕೊಂಡು ಹೋಗಿ ಬ್ಯಾಟಿಂಗ್ ಮತ್ತು ಕ್ಷೇತ್ರರಕ್ಷಣೆಯ ಕೌಶಲ ಹೇಳಿಕೊಟ್ಟರು. ಆಗಿನ ವಿಕೆಟ್ ಕೀಪರ್ ಈಶನ್ ಕಿಶನ್ ಹೆಗಲ ಮೇಲೆ ಕೈ ಇಟ್ಟು ದೂರಕ್ಕೆ ಕರೆದುಕೊಂಡು ಹೋಗಿ ಒಂದಷ್ಟು ಗುಟ್ಟು ಹೇಳಿಕೊಟ್ಟರು. ಆ ಪಂದ್ಯದಲ್ಲಿ ಈಶನ್, ಕರ್ನಾಟಕದ ವಿರುದ್ಧ ಶತಕ ಬಾರಿಸಿದ್ದರು!

‘ಇಷ್ಟೊಂದು ಸೊಗಸಾದ ಆಟಕ್ಕೆ ಕಾರಣವೇನು?’ ಎಂದು ಈಶನ್ ಅವರನ್ನು ಪ್ರಶ್ನಿಸಿದ್ದಕ್ಕೆ, ‘ಥಾಲಾ ಕ ಚಮತ್ಕಾರ್’ ಎಂದು ತುಟಿಯಂಚಿನಲ್ಲಿ ನಗು ಅರಳಿಸಿದ್ದರು.

ಇನ್ನೊಂದು ಘಟನೆ ನಡೆದಿದ್ದು 201516ರ ದೇಶಿ ಋತುವಿನಲ್ಲಿ. ಆ ವರ್ಷ ವಿಜಯ ಹಜಾರೆ ಟ್ರೋಫಿ ಟೂರ್ನಿಯ ಪಂದ್ಯಗಳು ಬೆಂಗಳೂರು ಸಮೀಪದ ಆಲೂರಿನಲ್ಲಿ ನಡೆದಿದ್ದವು. ಆ ವ್ಯಕ್ತಿಯ ಆಟವನ್ನು ಕಣ್ತುಂಬಿಕೊಳ್ಳಲು ಸುತ್ತಮುತ್ತಲಿನ ಊರುಗಳಿಂದ ಅಭಿಮಾನಿಗಳು ಬಂದಿದ್ದರು. ಮಾಧ್ಯಮದವರು, ಮೈದಾನದ ಸಿಬ್ಬಂದಿ, ತಂಡಗಳ ಅಧಿಕಾರಿಗಳು ಹೀಗೆ ಎಲ್ಲರಿಗೂ ಆ ವ್ಯಕ್ತಿಯ ಜೊತೆ ಫೋಟೊ ಕ್ಲಿಕ್ಕಿಸಿಕೊಳ್ಳುವ ಅದಮ್ಯ ಬಯಕೆ. ಇದನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಅವರು ಸಮಾಧಾನದಿಂದ ಎಲ್ಲರೊಂದಿಗೆ ಫೋಟೊ ತಗೆಸಿಕೊಂಡರು. ಮೈದಾನ ಸ್ವಚ್ಛ ಮಾಡುವ ಸಿಬ್ಬಂದಿ ಬಳಿ ಖುದ್ದು ತೆರಳಿ ‘ನಿಮ್ಮೊಂದಿಗೆ ನಾನೊಂದು ಫೋಟೊ ತಗೆಸಿಕೊಳ್ಳಬೇಕಿದೆ’ ಎಂದು ಮೆಲುವಾದ ಧ್ವನಿಯಲ್ಲಿ ಹೇಳಿ ಸಿಬ್ಬಂದಿಯಲ್ಲಿ ಅಚ್ಚರಿ ಉಂಟು ಮಾಡಿದ್ದರು.

ಹೀಗೆ ಒಂದೂವರೆ ದಶಕದ ಅಂತರರಾಷ್ಟ್ರೀಯ ಕ್ರಿಕೆಟ್ ಬದುಕಿನಲ್ಲಿ ಅತ್ಯಂತ ಸರಳತೆ, ಕಿರಿಯ ಆಟಗಾರರನ್ನು ಹುರಿದುಂಬಿಸುವ ಗುಣ, ದಿಟ್ಟ ನಾಯಕತ್ವ ಹಾಗೂ ಅಚ್ಚರಿಗಳನ್ನು ನೀಡುತ್ತಲೇ ಮಹಾನಾಯಕ ಎನಿಸಿಕೊಂಡವರು ಮಹೇಂದ್ರ ಸಿಂಗ್ ಧೋನಿ. ಮಹಿ, ಕ್ಯಾಪ್ಟನ್ ಕೂಲ್, ಥಾಲಾ, ಎಂಎಸ್‌ಡಿ, ಗ್ರೇಟ್ ಫಿನಿಷರ್ – ಹೀಗೆ ಹಲವಾರು ಹೆಸರುಗಳಿಂದ ಖ್ಯಾತರಾಗಿರುವ ಧೋನಿ ಈಗ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ಇದರಿಂದ ಭಾರತ ಕ್ರಿಕೆಟ್‌ನ ಒಂದು ಯುಗ ಅಂತ್ಯವಾದಂತಾಗಿದೆ.

ಸದ್ದಿಲ್ಲದೆ ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದು, ಅನಿರೀಕ್ಷಿತವಾಗಿ ನಾಯಕತ್ವದ ಸ್ಥಾನ ಹೊತ್ತು, ವಿಕೆಟ್‌ಗಳ ಹಿಂದೆಯೂ ಚಮತ್ಕಾರಗಳನ್ನು ಮಾಡಿ, ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಸದ್ದಿಲ್ಲದೆ ದೂರ ಸರಿದ ಧೋನಿ ಬದುಕು ಸದಾ ಅಚ್ಚರಿಗಳ ಗಣಿ. ಹೊಸ ಸಾಹಸಕ್ಕೆ ಕೈ ಹಾಕುವ, ತಮ್ಮ ಯೋಜನೆ ಯಶಸ್ವಿಯಾಗಲು ಕಠಿಣ ನಿರ್ಧಾರಗಳನ್ನು ತಗೆದುಕೊಳ್ಳಲು ಅವರು ಹಿಂಜರಿಯಲಿಲ್ಲ.

ಗಣಿಗಾರಿಕೆಗೆ ಹೆಸರಾದ, ವೃತ್ತಿಪರ ಕ್ರಿಕೆಟ್‌ನ ಗಂಧಗಾಳಿಯೂ ಇಲ್ಲದ ಜಾರ್ಖಂಡ್‌ನಿಂದ ಹಲವಾರು ಸಂಕಷ್ಟಗಳನ್ನು ಎದುರಿಸಿ ಬಂದ ಧೋನಿ, ತಾವೊಬ್ಬ ಜಗತ್ತೇ ಮೆಚ್ಚುವಂಥ ನಾಯಕನಾಗಬಹುದು ಎನ್ನುವ ಕಲ್ಪನೆಯನ್ನೂ ಕಂಡಿರಲಿಕ್ಕಿಲ್ಲ. ಯಾಕೆಂದರೆ ತಂಡದಲ್ಲಿ ಸ್ಥಾನ ಗಿಟ್ಟಿಸಲು ಬಿಸಿಸಿಐನಲ್ಲಿ ಆಗ ಪ್ರಾಬಲ್ಯ ಹೊಂದಿದ್ದ ಮುಂಬೈ ಹಾಗೂ ದೆಹಲಿ ಲಾಬಿಗಳನ್ನು ಎದುರಿಸುವುದು ಅಷ್ಟೊಂದು ಸುಲಭವಾಗಿರಲಿಲ್ಲ.

ಅಚ್ಚರಿಯೆಂದರೆ ಧೋನಿಗೆ ಕ್ರಿಕೆಟ್ ಬಗ್ಗೆ ಆಸಕ್ತಿಯೇ ಇರಲಿಲ್ಲ. ರಾಂಚಿಯ ಶ್ಯಾಮಲಿಯಲ್ಲಿ ‘ಜವಾಹರ ವಿದ್ಯಾಮಂದಿರ’ದಲ್ಲಿ ಓದುವಾಗ ಬ್ಯಾಡ್ಮಿಂಟನ್ ಹಾಗೂ ಫುಟ್‌ಬಾಲ್ ಕ್ರೀಡೆಗಳಲ್ಲಿ ಕ್ಲಬ್ ಹಾಗೂ ಜಿಲ್ಲಾ ಮಟ್ಟದ ಟೂರ್ನಿಗಳಲ್ಲಿ ಶಾಲಾ ತಂಡವನ್ನು ಪ್ರತಿನಿಧಿಸಿದ್ದರು. ಫುಟ್‌ಬಾಲ್‌ನಲ್ಲಿ ಗೋಲ್‌ಕೀಪರ್ ಆಗಿದ್ದ ಧೋನಿ ಚೆಂಡನ್ನು ನಿಯಂತ್ರಣಕ್ಕೆ ಪಡೆಯುತ್ತಿದ್ದ ಚುರುಕುತನ, ಪಾದರಸದ ವೇಗ ಕ್ರಿಕೆಟ್‌ನತ್ತ ಸೆಳೆಯಿತು. ಇದರಿಂದ ಅವರ ಫುಟ್‌ಬಾಲ್ ಕೋಚ್ ಕೇಶವರಂಜನ್ ಬ್ಯಾನರ್ಜಿ ಸ್ಥಳೀಯ ಕ್ರಿಕೆಟ್ ಅಕಾಡೆಮಿಗೆ ಕಳುಹಿಸಿದರು. 1995ರಿಂದ ನಾಲ್ಕು ವರ್ಷ ಕಮಾಂಡೊ ಕ್ರಿಕೆಟ್ ಕ್ಲಬ್‌ನಲ್ಲಿ ಆಡಿ ವಿಕೆಟ್ ಕೀಪಿಂಗ್‌ನಲ್ಲಿ ಪಳಗಿದರು. 1997–98ರ ದೇಶಿ ಋತುವಿನಲ್ಲಿ 16 ವರ್ಷದ ಒಳಗಿನವರ ವಿನೂ ಮಂಕಡ್ ಟೂರ್ನಿಗೆ ಆಯ್ಕೆಯಾದರು. ಪಶ್ಚಿಮ ಬಂಗಾಳದ ಖರಗಪುರದಲ್ಲಿ ರೈಲ್ವೆಯಲ್ಲಿ ಟಿ.ಟಿ. ಆಗಿ ಕೆಲಸಕ್ಕೆ ಸೇರಿದರು. ರಾತ್ರಿಪೂರ್ತಿ ಕೆಲಸ ಮಾಡಿ, ಹಗಲಿನಲ್ಲಿ ಕ್ರಿಕೆಟ್‌ಗಾಗಿ ಬೆವರು ಸುರಿಸುತ್ತಿದ್ದರು.

## ಆರಂಭದ ಹಿನ್ನಡೆಯ ಆತಂಕ

ಬಲಗೈ ಬ್ಯಾಟ್ಸ್‌ಮನ್ ಹಾಗೂ ವಿಕೆಟ್ ಕೀಪರ್ ಧೋನಿ 1999ರಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ನಾಲ್ಕೇ ವರ್ಷಗಳಲ್ಲಿ ಭಾರತ ಏಕದಿನ ತಂಡದಲ್ಲಿ ಅವಕಾಶ ಪಡೆದರು. ಬಾಂಗ್ಲಾದೇಶ ವಿರುದ್ಧ ಚಿತ್ತಗಾಂಗ್‌ನಲ್ಲಿ ಏಕದಿನ ತಂಡಕ್ಕೆ ಪದಾರ್ಪಣೆ ಮಾಡಿದರು. ಆ ಸರಣಿಯಲ್ಲಿ ಮೂರು ಪಂದ್ಯಗಳಿಂದ ಧೋನಿ ಗಳಿಸಿದ್ದು ಕೇವಲ 19 ರನ್!

2005ರಲ್ಲಿ ಏಕದಿನ ಸರಣಿಯಾಡಲು ಪಾಕಿಸ್ತಾನ ತಂಡ ಭಾರತಕ್ಕೆ ಬಂದಿತ್ತು. ಮೊದಲ ಪಂದ್ಯದಲ್ಲಿ ಧೋನಿ ಮೂರೇ ರನ್‌ಗೆ ಔಟ್ ಆದರು.